
REVIEW OF RESEARCH
ISSN: 2249-894X
IMPACT FACTOR : 5.7631(UIF)
VOLUME - 14 | ISSUE - 7 | APRIL - 2025

ಬೇಂದ್ರೆಯವರ ನಲ್ವಾಡುಗಳು

ಡಾ. ಶಿವಕುಮಾರ ಪಿ. ಆರ್
ಸಹ ಪ್ರಾಧ್ಯಾಪಕರು
ಶ್ರೀ ಹೆಚ್ .ಡಿ ದೇವೇಗೌಡ ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಪಡುವಲಹಿಪ್ಪೆ
ಹೊಳೆನರಸೀಪುರ ತಾ
ಹಾಸನ ಜಿಲ್ಲೆ



ಬೆಂದು ಬೆಂದು ಬೇಂದ್ರೆ ಆದರೂ ಎಂಬ ಮಾತಿನಂತೆ ಜೀವನದಲ್ಲಿ ನೋವುಗಳನ್ನೇ ಕಂಡರೂ ಸಹ ತಮ್ಮ ಅನುಭವಗಳನ್ನೆ ಅನುಭಾವ ಅಗಿಸಿಕೊಂಡು, ಓದುಗರಿಗೆ ನಲುಮೆಯ ಸಾರವನ್ನು ನೀಡಿದ ಬೇಂದ್ರೆಯವರ ಒಲವಿನ ಗೀತೆಗಳ ವಿಶ್ಲೇಷಣೆ ಈ ಲೇಖನದ ಆಶಯವಾಗಿದೆ.

'ಎನ್ನ ಪಾಡ ಎನಗಿರಲಿ ಅದರ ಹಾಡನಷ್ಟೇ
ನೀಡುವೆನು ರಸಿಕ ನಿನಗೆ
ಕಲ್ಲು ಸಕ್ಕರೆಯಂಥ ನಿನ್ನೆದೆಯು ಕರಗಿದರೆ
ಆ ಸವಿಯ ಹಣಿಸು ನನಗೆ'

ಎನ್ನುತ್ತಾ ಓದುಗರಿಗೆ ಕಾವ್ಯ ಸುಧೆಯ ಉಣ ಬಡಿಸಿದ ಕವಿಯ ಒಲವಿನ ಕವಿತೆಗಳ ಒಂದು ಇಣುಕು ನೋಟ.

´ಒಲವೆ ನಮ್ಮ ಬದುಕು' ಎಂದು ಸಾರಿದ ಬೇಂದ್ರೆ ತಮ್ಮ ಅನುಭವಗಳನ್ನೇ ಅನುಭಾವವಾಗಿಸಿಕೊಂಡ ಕವಿ. 'ಸಮರಸವೇ ಜೀವನ' ಎಂದು ಸದಾ ಬದುಕಿನಲ್ಲಿ ಸಾಮರಸ್ಯಕ್ಕಾಗಿ ಹಂಬಲಿಸಿದವರು. ಒಂದು ಜೀವ ಇನ್ನೊಂದು ಜೀವದೊಂದಿಗೆ ಸಮರಸದಿಂದ ಬಾಳುತ್ತಾ, ಒಲವನ್ನು ಆಸ್ವಾದಿಸುತ್ತಾ ಬದುಕುವುದನ್ನು ತಿಳಿಸಿದರು. ಜೀವನದಲ್ಲಿ ಸದಾ ಅಸ್ಥಿರತೆ, ಸಾಲುಸಾಲಾಗಿ ಮಕ್ಕಳ ಸಾವುಗಳನ್ನು ಕಂಡ ಬೇಂದ್ರೆಯವರು ದುಃಖಗಳನ್ನು ನುಂಗುತ್ತಲೇ ಬದುಕಿನ ಬಗ್ಗೆ ಭರವಸೆಗಳನ್ನು ಕಳೆದುಕೊಳ್ಳದೆ ಬಾಳಿದವರು. ದುಃಖ ಸಂಘರ್ಷಗಳಲ್ಲಿ ಬೇಯುತ್ತಲೇ ಹೆಜ್ಜೆ ಹಾಕಿದ ಬೇಂದ್ರೆ ´ಬೆಂದರೆ ಬೇಂದ್ರೆ' ಎಂಬ ಮಾತಿಗೆ ನಿದರ್ಶನದಂತೆ.

ಬೇಂದ್ರೆಯವರು ಒಲವನ್ನು ತಮ್ಮ ಬದುಕಿನ ಸಂದರ್ಭದಲ್ಲಿ ಅನುಭವಿಸುತ್ತಾ ಒಲವಿಗೆ ಕಾವ್ಯರೂಪವನ್ನು ನೀಡುತ್ತಾ ಬದುಕಿದರು. 'ಒಲವೆಂಬ ಹೊತ್ತಿಗೆಯನೋದ ಬಯಸುತ ನೀನು ಬೆಲೆಯೆಷ್ಟು ಎಂದು ಕೇಳುತಿಹೆ? ಹುಚ್ಚ! ಹಗಲಿರುಳು ದುಡಿದೂ, ಹಲಜನಮ ಕಳೆದರೂ ನೀ ತೆತ್ತಲಾರೆ ಬರೀ ಅಂಚೆ ವೆಚ್ಚ' (ಒಲವೆಂಬ ಹೊತ್ತಿಗೆ) ಎಂದು ಕಾವ್ಯ ರಸಿಕರಿಗೆ ಒಲವಿನ ಬಲವನ್ನು ತೋರಿಸಿದವರು.

ಬೇಂದ್ರೆಯವರ ಬದುಕು ಚದುರಿದ ಚಿತ್ರಗಳಂತೆ. ಆ ಬದುಕಲ್ಲಿ ಭರವಸೆಯಿಂದ ಬಾಳಿದ ಕವಿಯು ನಮಗೆಲ್ಲ ಆದರ್ಶವೇ ಸರಿ. ಅವರ ವೈಯಕ್ತಿಕ ಬದುಕನ್ನೇ ನುಡಿಯಾಗಿಸಿದ ಅವರ ಕವನಗಳಲ್ಲಿ ಪತಿ–ಪತ್ನಿಯರು ಸ್ನೇಹ ಸಂಬಂಧದಿಂದ ಅರಿತು ಬಾಳುವ ಚಿಂತನೆಯನ್ನು ಹೊಂದಿವೆ. ಅವರು ಬಡತನದ ಬೇಗೆಯಲ್ಲಿ ಬಾಳಿದವರು. ಅವರ ಬರಹದಲ್ಲೂ ಬಡತನದ ಛಾಯೆಗಳನ್ನು ಕಾಣಬಹುದು. ಅವರ ದಾಂಪತ್ಯ ಗೀತೆಗಳು ಅಥವಾ ಒಲವಿನ ಗೀತೆಗಳಲ್ಲೂ ಬಡತನವು ಇಣುಕಿ ನೋಡುತ್ತದೆ. ಅಂದಿನ ಕಾಲದ ನಿಷ್ಕಲ್ಮಶ ಪ್ರೀತಿಗೆ ಆ ಬಡತನವೇನು ಅಡ್ಡಿ ಬಂದಿರಲಾರದು. ಅವರ ನನ್ನ ಕೈಯ ಹಿಡಿದಾಕೆ ಕವಿತೆಯ ಸಾಲುಗಳನ್ನು ಗಮನಿಸಿದರೆ

ಬಡತನ ಒಡೆತನ ಕಡೆತನಕುಳಿದಾವೇನ
ಎದೆಹಿಗ್ಗು ಕಡೆಮುಟ್ಟ
ಬಾಳಿನ ಕಡಲಾಗ ಅದನ ಮುಳಗಿಸಬ್ಯಾಡ
ಕಡೆಗೋಲು ಹಿಡಿಹುಟ್ಟ
ನನ ಕೈಯ ಹಿಡಿದಾಕೆ ಅಳು ನುಂಗಿ ನಗು ಒಮ್ಮೆ
ನಾನೂನು ನಕ್ಕೇನ
ಇಲದಿರಕ ನಿನ ಅಳುವ ಹುಚ್ಚು ಹಳ್ಳದ ಕಳ್ಳ
ಹುದುಲಾಗ ಸಿಕ್ಕೇನ

ಬಡತನ ಮತ್ತು ಶ್ರೀಮಂತಿಕೆಯೇ ಜೀವನದ ಕೊನೆ ಅಲ್ಲ. ಎದೆ ಹಿಗ್ಗು, ತೃಪ್ತಿ ಎಂಬುದೇ ಕಡೆತನಕ ಉಳಿಯುವಂತಹದ್ದು. ಅದನ್ನು ಬಾಳೆಂಬ ಕಡಲಿನ್ಯಾಗ ಮುಳುಗಿಸಬೇಡ. ಹುಟ್ಟು ಹಿಡಿದ ಬಾಳನ್ನು ಕಡಲಲ್ಲಿ ಮುನ್ನೆಡೆಸು ಎಂದು ತನ್ನ ಕೈಯ ಹಿಡಿದಾಕೆಗೆ ಕೇಳುತ್ತಾರೆ. ಕವಿಯು ನನ ಕೈಯ ಹಿಡಿದಾಕೆ ಎಂದು ಆಪ್ತವಾಗಿ ಹೆಂಡತಿಗೆ ಕರೆಯುತ್ತಾ ಆಳ ಬೇಡ ನಗು ಒಮ್ಮೆ, ನಾನು ನಗುತ್ತೇನೆ. ಇಲ್ಲದೆ ಹೋದರೆ ನಿನ್ನ ಅಳುವಿನ ಹುದಲಲ್ಲಿ ಸಿಕ್ಕು ನಾನು ಘಾಸಿಯಾಗುತ್ತೇನೆ ಎನ್ನುತ್ತಾರೆ. ಸಾಮರಸ್ಯದ ಬಾಳುವೆಯ ಪರಿಯನ್ನು ನಾವಿಲ್ಲಿ ಕಾಣಬಹುದಾಗಿದೆ. ನನ್ನ ಕೈಯ ಹಿಡಿದಾಕೆ ಎನ್ನುತ್ತಿರುವುದು ಹೆಣ್ಣಿಗೆ ಸಂಸಾರದಲ್ಲಿ ಒಂದು ಪ್ರಮುಖವಾದ ಸ್ಥಾನವನ್ನು ನೀಡುತ್ತಾ, ಬದುಕಿನುದ್ದಕ್ಕೂ ನನ್ನ ಕೈ ಹಿಡಿದು ನಡೆಸುವವಳು ನೀನು ಹಾಗಾಗಿ ಪರಸ್ಪರ ಅವಲಂಬನ, ಸಹಕಾರ ಇವು ದಾಂಪತ್ಯದಲ್ಲಿ ಇರಬೇಕಾದ ಗುಣಗಳೇ ಆಗಿವೆ ಎಂದಿದ್ದಾರೆ.

ಬೇಂದ್ರೆಯವರ ದಾಂಪತ್ಯದ ಎದೆಯಾಳದ ಪ್ರೀತಿ 'ನಾನು ಬಡವಿ' ಕವನದಲ್ಲಿ ಹೊರಹೊಮ್ಮಿದೆ. ಇಲ್ಲಿ ಪತ್ನಿಯ ನಿರಾಸೆ ಖಾಯಂ ಇರುವಂತಹದಲ್ಲ. ಪತಿಯ ಬಡತನದಲ್ಲೂ ಸುಖವನ್ನು ಕಾಣುವ ಅವಳು ಪತಿಯ ಕಲ್ಯಾಣವನ್ನೇ ಬಯಸುವಂತಹವಳು. ಅವಳೇ ಹೇಳುತ್ತಾಳೆ.

ನಾನು ಬಡವಿ
ಆತ ಬಡವ
ಒಲವೆ ನಮ್ಮ ಬದುಕು
ಬಳಸಿಕೊಂಡೆವು ನಾವು
ಅದಕು ಇದಕು ಎದಕು

ಪರಸ್ಪರ ಆರ್ಥಿಕ ಪರಿಸ್ಥಿತಿ ಇಬ್ಬರಿಗೂ ಗೊತ್ತಿದೆ. ಹೀಗಾಗಿ ಕವಿ ಹೇಳುವದಕ್ಕಿಂತ ಮೊದಲೇ ಆಕೆಯೇ ಇಬ್ಬರ ನಡುವಿನ ಸಾಮರಸ್ಯದ ಒಲವನ್ನೇ ಅದಕು ಇದಕು ಎದಕು ಬಳಸಿಕೊಳ್ಳಲು ಪತಿಯೊಡನೆ ಸಹಕರಿಸುತ್ತಾಳೆ. ಇಲ್ಲಿ ಪ್ರೀತಿಯ ಸಿರಿತನ ತನ್ನೆಲ್ಲ ಭಾವ ವೈಭವದೊಡನೆ ಮೆರೆದು ಸಹೃದಯರ ಹೃದಯಕ್ಕೆ ಲಗ್ಗೆಯಿಟ್ಟಿದೆ. ಇಲ್ಲಿ ಬಡವಿಯು ತನ್ನ ಅಂತರ್ಯದ ಸವಿಯನ್ನು ಹಾಡಾಗಿ ಹಾಡಿದ್ದಾಳೆ.

ಆತ ಕೊಟ್ಟ ವಸ್ತು ಒಡವೆ
ನನಗೆ ಅವಗೆ ಗೊತ್ತು
ತೋಳುಗಳಿಗೆ ತೋಳ ಬಂದಿ
ಕೆನ್ನೆ ತುಂಬ ಮುತ್ತು

ಬಡವರಾದ ದಂಪತಿಗಳಿಗೆ ಒಡವೆ ಇಲ್ಲ. ಇವರಿಗೆ ಒಡವೆ ಬೇಕೆಂದಿಲ್ಲ. ಒಡವೆ ವಸ್ತು ರೂಪದ್ದು, ಅಂದರೆ ಮೂರ್ತ ರೂಪ ಪಡೆದಿರುತ್ತದೆ. ಪ್ರೀತಿ ಅಮೂರ್ತವಾದದ್ದು, ಮೌಲ್ಯಯುತವಾದದ್ದು. ಹೆಂಡತಿಯ ಈ ಹೇಳಿಕೆಗಳು ಇಂದಿನ ಐಷಾರಾಮಿ ಬದುಕಿನಲ್ಲಿ ಸಾಕಷ್ಟು ಚಿಂತನೆಗೆ ಹಚ್ಚುತ್ತವೆ. ಜೀವನದ ಜಂಜಾಟದಲ್ಲಿರುವ ದಂಪತಿಗಳಿಗೆ ಸಾಂತ್ವಾನದ ಗೀತೆಯಾಗಿ ಇದು ಕಾವ್ಯರಸಿಕರ ಮನದಲ್ಲಿದೆ.

'ಕುಣಿಯೋಣು ಬಾರ' ಕವಿತೆಯಲ್ಲಿ ಸುಖ ದುಃಖದ ಪರಿವೆಯ ಮರೆತು ಒಲವಿನ ಸಂತೋಷವನ್ನು ಹೆಜ್ಜೆಗಳ ಚಲನೆಯಲ್ಲಿ ಹರಿಬಿಡುತ್ತಾ ಸಂಸಾರದ ಭಾರವನ್ನು ಹಗುರವಾಗಿಸಿಕೊಳ್ಳೋಣ ಬಾ ಸಖಿ ಕುಣಿಯೋಣ ಎಂದು ಕುಣಿತಕ್ಕೆ ತನ್ನ ಜೀವದ ಗೆಳತಿಯನ್ನು ಕವಿ ಆಹ್ವಾನಿಸುತ್ತಾರೆ.

ಹಿಗ್ಗು ಹಾಕಿತು ಕ್ಯಾಕಿ
ಇರಲಾರೆನೇಕಾಕಿ
ಬಾ, ಬಾರ ನನ್ನಾಕಿ, ಕುಣಿಯೋಣು ಬಾ

ಸಖ ಸಖಿಯರಲ್ಲಿನ ಆಪ್ತತೆ ಅಂದಿನ ಸಂಪ್ರದಾಯವನ್ನು ಮೀರಿ ನಿಂತಿದೆ. ಬೇಂದ್ರೆಯವರ ಕವನಗಳಲ್ಲಿ ಹೆಂಡತಿಯನ್ನು 'ನನ್ನಾಕಿ' ಎಂದಿರುವುದು ಒಂದು ಆಪ್ತತೆಯ ಅನುಭೂತಿಯಾಗುತ್ತದೆ.

ಇದ್ದದ್ದು ಮರೆಯೋಣ
ಇಲ್ಲದ್ದು ತೆರೆಯೋಣ
ಹಾಲ್ಬೇನು ಸುರಿಯೋಣ, ಕುಣಿಯೋಣ ಬಾ

ಕುಣಿಯುವುದೆಂದರೆ ಅದು ದೈನಿಕದ ಜಂಜಡಗಳನ್ನು ಮರೆಯುವ ಮೂಲಕ ಬದುಕನ್ನು ಹಾಲುಜೇನಿನಂತೆ ಅರ್ಥಪೂರ್ಣ ಆಗಿಸಿಕೊಳ್ಳುವುದು ಎನ್ನುವ ಇಂಗಿತ ಇವರ ಕವಿತೆಯಲ್ಲಿದೆ. ಬೇಂದ್ರೆಯವರ ಕಾವ್ಯಗಳು ಭಾವನಾತ್ಮಕವಾಗಿ ಕಾವ್ಯ ರಸಿಕರ ಹೃದಯವೀಣೆಯನ್ನು ಮಿಡಿಯುತ್ತಲೇ ಬಂದಿವೆ.

ನಮ್ಮ ವಾಸ್ತವ ಜಗತ್ತಿನಲ್ಲಿ ತೀರಾ ಪರಿಚಿತವಾಗಿ, ನೀರಸವಾಗಿ ಕಂಡದ್ದು ಬೇಂದ್ರೆಯವರ ಜಗತ್ತಿನಲ್ಲಿ ಹೊಚ್ಚ ಹೊಸದಾಗಿ, ಆಕರ್ಷಕವಾಗಿ ಚೈತನ್ಯಮಯವಾಗಿ ಕಾಣತೊಡಗುತ್ತದೆ. (ಡಿ. ಆರ್ ನಾಗರಾಜ್ ಶಕ್ತಿ ಶಾರದೆಯ ಮೇಳ) ಉದಾಹರಣೆಗೆ ಅವರ 'ಅನಂತ ಪ್ರಣಯ' ಕವಿತೆಯನ್ನು ನೋಡಿದರೆ ಪ್ರಕೃತಿಯಲ್ಲಿ ಪ್ರೇಮದ ಸಾಕ್ಷತ್ಕಾರವನ್ನು ಕವಿ ಕಾಣುತ್ತಾರೆ. ಕವಿತೆಯಲ್ಲಿ ಸೂರ್ಯ ಚಂದ್ರರ ಆಕರ್ಷಣೆಯನ್ನು ಆಧರಿಸಿ ಹೆಣ್ಣು ಗಂಡಿನ ಪ್ರೀತಿಯಾಗಿಸಿ ಒಂದು ರೂಪಕವಾಗಿ ಬಣ್ಣಿಸಿದ್ದಾರೆ. ಕವಿಯ ಕಲ್ಪನೆಯಲ್ಲಿ ಚಂದ್ರ ಪ್ರಿಯೆಯಾಗಿ ಸೂರ್ಯ ಪ್ರಿಯಕರನಾಗಿದ್ದಾನೆ. ನಿಸರ್ಗ ಸಹಜಗತಿಯಲ್ಲಿ ಬೀಸುವ ಗಾಳಿ ಅವರಲ್ಲಿ ಪ್ರೀತಿಯ ಪ್ರವಾಹ ಹರಿಸಲು ಕಾರಣವಾಗಿದೆ. ಸೂರ್ಯ ಚಂದ್ರರ ನಡುವೆ ಇರುವ ಭೂಮಿಯನ್ನು ಪ್ರಿಯರ ಭೇಟಿಯ ಸ್ಥಳವಾಗಿಸಿದ್ದಾರೆ.

ಉತ್ತರಧ್ರುವದಿಂ ದಕ್ಷಿಣಧ್ರುವಕೂ
ಚುಂಬಕ ಗಾಳಿಯು ಬೀಸುತಿದೆ
ಸೂರ್ಯನ ಬಿಂಬಕೆ ಚಂದ್ರನ ಬಿಂಬವು
ರಂಬಿಸಿ ನಗೆಯಲಿ ಮೀಸುತಿದೆ

ಪ್ರಕೃತಿ ಸಹಜವಾಗಿ ಉತ್ತರಧ್ರುವದಿಂದ ದಕ್ಷಿಣಧ್ರುವಕ್ಕೆ ಮುದ್ದಿಡುವ ಲೋಹ ಚುಂಬಕದ ಗಾಳಿ ಬೀಸುತ್ತದೆ. ಪ್ರಿಯೆ ಚಂದ್ರಳಿಗೆ ಮಿಲನದ ತೀವ್ರತೆಯುಂಟಾಗಿ ತನ್ನ ಮತ್ತು ಅವನ ಮಧ್ಯೆ ಇರುವ ಭೂಮಿಯನ್ನೆ ಪ್ರಿಯನನ್ನು ಕೂಡಲು ಸಂಕೇತ ಸಾಧನವಾಗಿಸಿಕೊಳ್ಳುತ್ತಾಳೆ.

ಬೇಂದ್ರೆಯವರ ಪ್ರೇಮ ಮೀಮಾಂಸೆಯಲ್ಲಿ ವಿರಹಕ್ಕೆ ವಿಶಿಷ್ಟವಾದ ಸ್ಥಾನವಿದೆ. ಎರಡು ಜೀವಗಳು ಒಂದಾಗಿ ಬಾಳನ್ನು ಸಾಗಿಸುವ ಸಂದರ್ಭದಲ್ಲಿ ದ್ವಂದ್ವ ಸಂಘರ್ಷಗಳು ಇಲ್ಲದಿಲ್ಲ. ಬದುಕಿನ ಸಂದರ್ಭದಲ್ಲಿ ಹೆಣ್ಣು ಗಂಡುಗಳ ಅನುಭವ ಜಗತ್ತು ಬೇರೆ ಬೇರೆಯಾಗುತ್ತ ಅವರಿಬ್ಬರೂ ಒಂದೊಂದು ದಡವಾಗುವ ಅಪಾಯ ಇದ್ದೇ ಇರುತ್ತದೆ. ಆದರೆ ಅದನ್ನೆಲ್ಲ ಮೆಟ್ಟಿನಿಂತು ಐಕ್ಯಗೊಳ್ಳುವಂತೆ ಬೆಸೆವ ಮಂತ್ರ ಒಲವಿನಲ್ಲಿದೆ. ನಾದಲೀಲೆ ಸಂಕಲನದ 'ಮನದನ್ನೆ' ಕವಿತೆಯು ಜೀವನದಲ್ಲಿ ವಿರಸ ಬೇಡ. ಮುನಿಸು ಬದುಕಿಗೆ ಹೇಳಿ ಮಾಡಿಸಿದ್ದಲ್ಲ ಎಂಬ ಸಂದೇಶವನ್ನು ಹೇಳಿದೆ. ಈ ಕವಿತೆ ವಿರಸ ದಾಂಪತ್ಯದ ಚಿತ್ರಣವಿದ್ದು ಪತಿಪತ್ನಿಯರು ಪರಸ್ಪರರನ್ನ ತಿಳಿದು ಪ್ರೇಮಸಾಕ್ಷಾತ್ಕಾರವನ್ನು ಪಡೆಯಬೇಕೆಂಬ ಹಂಬಲವನ್ನು ಹೊಂದಿದೆ.

'ಆಡದಿರು ಮನದನ್ನೆ ಎನಗೆ ಇದಿರಾಡದಿರು' ಎಂದು ಪ್ರಾರಂಭವಾಗುವ ಕವಿತೆ ಹೆಂಡತಿಗೆ ತನಗೆ ಎದರು ಮಾತನಾಡಬೇಡ ಎಂಬ ಹುಕುಂ ಅನ್ನು ನೀಡುತ್ತಿರುವಂತೆ ಕಂಡರೂ ಕವಿತೆ ಬೆಳೆಯುತ್ತಾ ಜೀವ ಸಂವಾದಕ್ಕೆ ತಿರುಗುತ್ತದೆ. ಈ ಕವನದ ನಾಯಕ ಜೀವನದಲ್ಲಿ ಸೋತಿದ್ದು ಸಾಂತ್ವಾನಕ್ಕಾಗಿ ಮಡದಿಯನ್ನು ಆಶಿಸಿ ಬಂದಿದ್ದಾನೆ.
ಬೆಂದ ಹೆಣವನೆ ಕೊಂದು

ಭೂತಲೀಲೆಯಲೀಗ ತೊಡಗಬೇಡ

ಎಂದು ಅಪೂರ್ವ ರೂಪಕದಿಂದ ಸತ್ತ ಘಟನೆಗಳನ್ನು ಕೆದಕಿ ಜಗಳವಾಡುವ ಮನಸ್ಸನ್ನು ಬಣ್ಣಿಸಿದ್ದಾರೆ. ಬೆಂದ ಹೆಣವನ್ನು ಮತ್ತೆ ಕೊಲ್ಲುವುದು ಎಂದರೆ ಮುಗಿದ ವಿಷಯವನ್ನೇ ಪದೇ ಪದೇ ಕೆಣಕಿ ಜೀವವನ್ನು ನೋಯಿಸಬೇಡ ಎಂದಿದ್ದಾರೆ. ಇಲ್ಲಿ ನಾಯಕನಿಗೆ ವಾದ ವಿವಾದ ಸಾಕಾಗಿದೆ. 'ಜೀವ ಸಂವಾದಕ್ಕೆ ಹಸಿದು ಬಂದೆ' ನನ್ನನ್ನು ನೀನು ಸರಿಯಾಗಿ ತಿಳಿದುಕೊ 'ಜೀವಜೀವಾಳದಲಿ ಹೃದಯಾಂತರಾಳದಲಿ ಇಳಿದು ನೋಡು' ಎನ್ನುತ್ತಾನೆ. ತಾನು ಗಂಡು ದರ್ಪ ತೊರೆದು ನಿನ್ನ ತೊಟ್ಟಿಲ ಮಗುವಿನಂತೆ ಬಂದಿದ್ದೇನೆ. ನನಗೆ 'ನಿನ್ನ ತಾಯ್ತನದ ಸೈರಣೆಯನ್ನು ದಯಪಾಲಿಸು' ಎಂದು ಬೇಡಿಕೊಳ್ಳುತ್ತಾನೆ.

ಮಾಡದಿರು ಬಾಳನ್ನು ಬೇಳೆಯಂತೆ
ಕೂಡಿರಲಿ ಬಾಳು ಇಡಿಗಾಳಿನಂತೆ

ವಿರಸ ಮಾಗಿ ಸರಸ ಮೂಡಿ ಇಡಿಗಾಳಿನಂತಿರುವ ದಂಪತಿಗಳು ಜಗತ್ತಿನ ಉದ್ಧಾರಕ ಸಂತತಿಯ ಜನಕರಾಗುತ್ತಾರೆ. ಹಾಗೆಯೇ ಹೆಂಡತಿಯನ್ನು ಸಖಿ, ಮನದನ್ನೆ ಎಂದು ಕರೆಯುವ ಮೂಲಕ ಸ್ನೇಹ–ಸಲುಗೆಯ ಆಪ್ತಭಾವವೊಂದು ಸೃಷ್ಟಿಸುತ್ತಾರೆ. ಹೀಗೆ ಬೇಂದ್ರೆ ಬದುಕಿನ ಸಾಮರಸ್ಯಕ್ಕೆ ಹಂಬಲಿಸಿದವರು. 'ಅವರ ಸಾಮರಸ್ಯದ ಸಾಧನೆಗೆ ಒಲವು ಒಂದು ಮಹಾಮಾರ್ಗವಾಗಿದೆ'. (ಬೀಜದೊಳಗಣ ವೃಕ್ಷ– ಗೀತಾ ವಸಂತ)

ಕಡೆಯದಾಗಿ ಕವಿ ಗೋಪಾಲಕೃಷ್ಣ ಅಡಿಗರ ಮಾತಿನೊಂದಿಗೆ ಮುಗಿಸುವುದಾದರೆ "ತನ್ನ ವೈಯಕ್ತಿಕ ಜೀವನದ ನೋವು ನಲಿವುಗಳನ್ನು ಪ್ರೀತಿ ವಿರಹಗಳನ್ನೂ ಕುರಿತು ಈ ಕವಿಯಷ್ಟು ಭಾವಪೂರ್ಣ ಹೃದಯಸ್ಪರ್ಶಿ ಗೀತೆಗಳನ್ನು ರಚಿಸಿದವರು ಆಧುನಿಕ ಕನ್ನಡದಲ್ಲಿ ಬೇರೆ ಯಾರೂ ಇಲ್ಲ."

ಆಕರ ಗ್ರಂಥಗಳು

೧. ಭುವನದ ಭಾಗ್ಯ ಜಿ.ಎಸ್ ಆಮೂರ
೨. ಬೀಜದೊಳಗಣ ವೃಕ್ಷ – ಗೀತಾ ವಸಂತ
೩. ತಿರುತಿರುಗಿಯು ಹೊಸತಾಗಿರಿ ಜಿ ಕೃಷ್ಣಪ್ಪ
೪. ಮಂಗಳ ಲೋಕದ ಅಂಗಳಕೇರಿ ಜಿ.ವಿ ಕುಲಕರ್ಣಿ